**D**

**CCE PR**
**UN-REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 06. 2018 ] **ಸಂಕೇತ ಸಂಖ್ಯೆ : 62-K**

Date : 28. 06. 2018 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಅಷ್ಟಾದಶಾಕ್ಷರೀ ಮಂತ್ರವು ಯಾವುದು ?<br>***ಉತ್ತರ :***<br>ಅಷ್ಟಾದಶಾಕ್ಷರೀ ಮಂತ್ರ – "ವಸುಧಾವಳಯವಿಲೀನ ವಿಶದವಿಷಯವಿಶೇಷಂ." | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿತ ಸಂಸ್ಥೆ ಯಾವುದು ?<br>*ಉತ್ತರ :*<br>ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿತ ಸಂಸ್ಥೆ ಯಂಗ್ ಕ್ರಿಕೆಟರ್ಸ್. | |
| 3. | ತುಳಜಾಬಾಯಿ ಯಾರು ?<br>*ಉತ್ತರ :*<br>ತುಳಜಾಬಾಯಿ ರಾಮಸಿಂಗನ ತಾಯಿ. | |
| 4. | ಮೋಹನಪುರದಲ್ಲಿ ಬ್ರಿಟಿಷರ ವಿರುದ್ಧ ನಡೆದ ಚಳವಳಿ ಯಾವುದು ?<br>*ಉತ್ತರ :*<br>ಮೋಹನಪುರದಲ್ಲಿ ಬ್ರಿಟಿಷರ ವಿರುದ್ಧ ನಡೆದ ಚಳವಳಿ 'ಚಲೇಜಾವ್ ಚಳವಳಿ.' | |
| 5. | ಈಶ ಪ್ರಭುವು ಹೆಂಡತಿಯಿಂದ ಏನೆಂದು ಪ್ರಮಾಣ ಮಾಡಿಸಿಕೊಂಡನು ?<br>*ಉತ್ತರ :*<br>ಶಿವಾಜಿಯನ್ನು ನೀವು ಸೋಲಿಸಲೇಬೇಕು, ಹಾಗೆ ಮಾಡುತ್ತೇನೆಂದು ನನ್ನ ಕೈ ಮೇಲೆ ಕೈ ಇಟ್ಟು ಪ್ರಮಾಣ ಮಾಡಿ ಎಂದು ಪ್ರಮಾಣ ಮಾಡಿಸಿಕೊಂಡನು. | |
| 6. | ನಾ. ಕಸ್ತೂರಿಯವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾಗದ ಹೆಸರು ?<br>*ಉತ್ತರ :*<br>ನಾ. ಕಸ್ತೂರಿಯವರದು ಲಲಿತ ಪ್ರಬಂಧಗಳು ಮತ್ತು ಸ್ವಚ್ಛಂದ ಹರಟೆಗಳ ಕ್ಷೇತ್ರಗಳಲ್ಲಿ ಮರೆಯಲಾಗದ ಹೆಸರು. | |
| 7. | ನಾ. ಕಸ್ತೂರಿಯವರು ಕನ್ನಡ ಅಣಕವಾಡು ಸಂಪ್ರದಾಯಕ್ಕೆ ನೀಡಿರುವ ದೊಡ್ಡ ಕೊಡುಗೆ ಯಾವುದು ?<br>*ಉತ್ತರ :*<br>'ಅಣಕು ಮಿಣಕು' ಎಂಬ ತುಂಟಗೀತೆಗಳ ಸಂಕಲನವು ನಾ. ಕಸ್ತೂರಿಯವರು ಕನ್ನಡದ ಅಣಕವಾಡು ಸಂಪ್ರದಾಯಕ್ಕೆ ನೀಡಿರುವ ದೊಡ್ಡ ಕೊಡುಗೆಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಕೋಗಿಲೆಯ ಗಾನವು ಮನುಜ ಲೋಕವನ್ನು ಏನಾಗಿ ಪರಿವರ್ತಿಸಿದೆ ?<br>***ಉತ್ತರ :***<br>ಕೋಗಿಲೆಯ ಗಾನವು ಮನುಜ ಲೋಕವನ್ನು ದಿವಿಜರ ಸ್ವರ್ಗವನ್ನಾಗಿ ಪರಿವರ್ತಿಸಿದೆ. | |
| 9. | ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಏನಾಗುತ್ತೇವೆಂದು ಬಿ.ಆರ್. ಲಕ್ಷ್ಮಣರಾವ್ ಅವರು ಹೇಳಿದ್ದಾರೆ ?<br>***ಉತ್ತರ :***<br>ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಹೊಸ ಮನುಷ್ಯರಾಗುತ್ತೇವೆಂದು ಬಿ.ಆರ್. ಲಕ್ಷ್ಮಣರಾವ್ ಅವರು ಹೇಳಿದ್ದಾರೆ. | |
| 10. | ಅಂಬಿಗರ ಚೌಡಯ್ಯನು ಬಡತನಕ್ಕೆ ಯಾವ ಚಿಂತೆ ಎಂದಿದ್ದಾನೆ ?<br>***ಉತ್ತರ :***<br>ಅಂಬಿಗರ ಚೌಡಯ್ಯನು ಬಡತನಕ್ಕೆ ಉಂಬುವ (ಉಣ್ಣುವ) ಚಿಂತೆ ಎಂದಿದ್ದಾರೆ. | |
| 11. | ವಚನ ಪದ್ಯದಲ್ಲಿ ಹೇಳಿರುವಂತೆ ಮಕ್ಕಳಾದ ಮೇಲೆ ಯಾವ ಚಿಂತೆಯು ಮನುಷ್ಯನನ್ನು ಕಾಡುತ್ತದೆ ?<br>***ಉತ್ತರ :***<br>ವಚನ ಪದ್ಯದಲ್ಲಿ ಹೇಳಿರುವಂತೆ ಮಕ್ಕಳಾದ ಮೇಲೆ ಬದುಕಿನ ಚಿಂತೆಯು ಮನುಷ್ಯನನ್ನು ಕಾಡುತ್ತದೆ. | |
| 12. | ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ?<br>***ಉತ್ತರ :***<br>ಸಾತೆ (ಸ್ವಾತಿ) ಮಳೆ ಸುರಿದರೆ ಕೆರೆಗಳು ತುಂಬುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 13. | ಪುಲಿಗೆರೆ ಕವಿಸೋಮನು ಎಂತಹವನು ಮಂತ್ರಿಯಾಗಬೇಕೆಂದಿದ್ದಾನೆ ?<br>***ಉತ್ತರ :***<br>ಪುಲಿಗೆರೆ ಕವಿಸೋಮನು ನಾನಾ ಚಮತ್ಕಾರವನ್ನು ತಿಳಿದವನೇ ಮಂತ್ರಿಯಾಗಬೇಕೆಂದು ಹೇಳಿದ್ದಾನೆ. | |
| 14. | ಯುದ್ಧ ಮಾಡಬಲ್ಲವನು ಏನಾಗಬೇಕೆಂದು ಪುಲಿಗೆರೆ ಕವಿಸೋಮನು ಹೇಳಿದ್ದಾನೆ ?<br>***ಉತ್ತರ :***<br>ಯುದ್ಧ ಮಾಡಬಲ್ಲವನು ಭಟನಾಗಬೇಕೆಂದು ಪುಲಿಗೆರೆ ಕವಿಸೋಮನು ಹೇಳಿದ್ದಾನೆ. | |
| 15. | ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?<br>***ಉತ್ತರ :***<br>ಧರ್ಮಪದನು ಕೊನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು. | |
| 16. | ವಿಶುವನ್ನು ನೋಡಿದೊಡನೆಯೇ ಧರ್ಮಪದನಿಗುಂಟಾದ ಬಯಕೆ ಏನು ?<br>***ಉತ್ತರ :***<br>ವಿಶುವನ್ನು ನೋಡಿದೊಡನೆ ಅವನನ್ನು ಅಪ್ಪಿಕೊಳ್ಳಬೇಕೆಂಬ ಬಯಕೆಯು ಧರ್ಮಪದನಿಗುಂಟಾಯಿತು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಗೊರೂರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಲು ಕಾರಣವೇನು ?<br>***ಉತ್ತರ :***<br>ಗೊರೂರರು ತಮ್ಮ ಮಿತ್ರನನ್ನು ನೋಡಲು ಮಿನಿಪೊಲೀಸ್ ನಗರಕ್ಕೆ ಹೋಗಿ ದಾರಿ ತಪ್ಪಿದರು. ತಮ್ಮ ಅಸ್ಸಹಾಯಕ ಸ್ಥಿತಿಯನ್ನು ಟ್ರಾಫಿಕ್ ಪೊಲೀಸ್‌ನವನಲ್ಲಿ ಹೇಳಿ ಆತನ ಮೊರೆ ಹೋದರು. ಟ್ರಾಫಿಕ್ ಪೊಲೀಸನು ಗೊರೂರರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಉಪಚರಿಸಿದ. ಆತನ ಮನೆಯಲ್ಲಿ ಮಲಗಲು ವ್ಯವಸ್ಥೆ ಇರಲಿಲ್ಲ. ಆತನ ವಶದಲ್ಲಿದ್ದ ಲಾಕಪ್ ಗಾಳಿ–ಬೆಳಕು, ಸ್ವಚ್ಛವಾದ ಹಾಸಿಗೆ, ಕ್ರಿಮಿನಾಶಕ ಸಾರಣೆಯಿಂದ ಕೂಡಿತ್ತು. ಆದ್ದರಿಂದ ಅಲ್ಲಿ ಮಲಗುವಂತೆ ವ್ಯವಸ್ಥೆ ಮಾಡಿಕೊಟ್ಟಿದ್ದರಿಂದ ಲಾಕಪ್ಪಿನಲ್ಲಿ ಕಳೆಯಬೇಕಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಗೊರೂರರು ಮಿನಿ ಪೊಲೀಸ್ ನಗರದಲ್ಲಿ ದೀಪ ಹೊತ್ತಿದ ಮೇಲೆ ಏನೇನನ್ನು ನೋಡಿದರು ?<br>***ಉತ್ತರ :***<br>ದೀಪ ಹೊತಿದ ಮೇಲೆ ಗೊರೂರರು ಅಲ್ಲಲ್ಲಿ ಸುತ್ತಾಡಿದರು. ಸುತ್ತಾಡುತ್ತ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪದ ಗಾಳಿ, ಕಿಟಕಿಗಳ ದೀಪಾಲಂಕಾರವನ್ನು ನೋಡಿದರು. | |
| 19. | ಅನಿಲ್ ಕುಂಬ್ಳೆಯವರ ಶಾಲಾ ಶಿಕ್ಷಣವನ್ನು ಕುರಿತು ಬರೆಯಿರಿ.<br>***ಉತ್ತರ :***<br>ಅನಿಲ್ ಕುಂಬ್ಳೆಯವರ ಪ್ರಾಥಮಿಕ ಶಿಕ್ಷಣವನ್ನು ಹೋಲಿ ಸೇಂಟ್ ಇಂಗ್ಲಿಷ್ ಶಾಲೆಯಲ್ಲೂ, ಪ್ರೌಢಶಿಕ್ಷಣವನ್ನು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲೂ ಮುಗಿಸಿದರು. | |
| 20. | ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಕುಂಬ್ಳೆಯವರ ಸಾಧನೆಯೇನು ?<br>***ಉತ್ತರ :***<br>ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದ ಅನಿಲ್ ಕುಂಬ್ಳೆಯವರು ಐ.ಪಿ.ಎಲ್. ಕ್ರೀಡಾಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತೀ ಹೆಚ್ಚು ವಿಕೆಟ್ ಪಡೆದ ಎರಡನೆಯ ಬೌಲರ್ ಎಂಬ ಹಿರಿಮೆಗೆ ಪಾತ್ರರಾದರು. ಮೂರನೆಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದು ಕೀರ್ತಿಯನ್ನು ಪಡೆದರು. | |
| 21. | ರಾಮಸಿಂಗನಿಗೂ ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.<br>***ಉತ್ತರ :***<br>ರಾಮಸಿಂಗನು ಎರಡು ರಸ್ತೆಗಳು ಕೂಡುವ ಸ್ಥಳದಲ್ಲಿ ಜಯ ಜಯಕಾರವನ್ನು ಕೂಗುತ್ತ ಸ್ವಯಂ ಸೇವಕರೊಂದಿಗೆ ಬರುವನು. ಅಷ್ಟರಲ್ಲಿ ಇಬ್ಬರು ಸಿಪಾಯಿಗಳು ಪೊಲೀಸ್ ಸಮವಸ್ತ್ರದಲ್ಲಿ ಬಂದು ಇಲ್ಲಿ ಸಭೆ ಸೇರಕೂಡದೆಂದು ಡಂಗುರ ಸಾರಿದೆ ಎನ್ನಲು ರಾಮಸಿಂಗನು ಇದು ನಮ್ಮ ಊರು ಡಂಗುರ ಸಾರಲು ನಿಮ್ಮಪ್ಪನ ಮನೆಯಲ್ಲ ಎನ್ನುವನು. ಸಿಪಾಯಿಗಳು ಇಲ್ಲಿ ರಾಜ್ಯವಾಳುವವರು ನೀವಲ್ಲ, ಬ್ರಿಟಿಷ್ ಸರ್ಕಾರದವರು ಎಂದಾಗ ರಾಮಸಿಂಗನು ನೀವು ಬ್ರಿಟಿಷರಲ್ಲ ಜನರೊಪ್ಪದೆ ಬ್ರಿಟಿಷರ ಆಟ ಇನ್ನು ಭಾರತದಲ್ಲಿ ನಡೆಯಲಾರದು. ಈ ಮಾತನ್ನು ಸೆರಗಿಗೆ ಗಂಟು ಹಾಕಿಕೊಳ್ಳಿ ಎನ್ನುವನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಮೊಘಲರು ಪ್ರಾಣಭೀತಿಯಿಂದ ಪಲಾಯನಗೈಯಲು ಕೆಳದಿ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು ?<br>***ಉತ್ತರ :***<br>ಔರಂಗಜೇಬನು ಅಜಮತಾರನೊಂದಿಗೆ ಬಾರೀ ಸ್ಯನ್ಯವನ್ನು ಕಳಿಸಿದ್ದನ್ನು ತಿಳಿದ ಚಾಣಾಕ್ಷಳಾದ ಚೆನ್ನಮ್ಮಾಜಿಯು ತನ್ನ ರಾಜಧಾನಿಯನ್ನು ಕೆಳದಿಯಿಂದ ಭುವನಗಿರಿಗೆ ಸ್ಥಳಾಂತರಿಸಿ ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟು ದಾರಿ, ಕಾಲುದಾರಿ, ಕಳ್ಳ ದಾರಿಗಳಲ್ಲಿ ತನ್ನ ಸೈನ್ಯವನ್ನು ನಿಲ್ಲಿಸಿ ಮೊಘಲರ ಸೈನ್ಯಕ್ಕೆ ಅನ್ನ ನೀರು ಸಿಗದಂತೆ ಮಾಡಿದಳು. ಮಲೆನಾಡಿನ ಮಳೆಗೆ ಮೊಘಲರ ಸೇನೆಯು ತತ್ತರಿಸಿ ಪ್ರಾಣಭೀತಿಯಿಂದ ಓಡಿಹೋಗುವಂತೆ ಉಪಾಯ ಮಾಡಿದಳು. | |
| 23. | ಕಸ್ತೂರಿಯವರಿಗೆ 'ಸಂಕಟದ ವಿಷಯ'ವಾದುದು ಯಾವುದು ?<br>***ಉತ್ತರ :***<br>ಕಸ್ತೂರಿಯವರು ಒಮ್ಮೆ ಅನಾರೋಗ್ಯದ ನಿಮಿತ್ತ ವೈದ್ಯರ ಬಳಿಗೆ ಹೋದರು. ಮಲ ಪರೀಕ್ಷೆಗಾಗಿ ಬೆಳಗ್ಗೆ ಒಂದು ಡಬ್ಬದಲ್ಲಿ ಮಲವನ್ನು ಸಂಗ್ರಹಿಸಿಕೊಂಡು ಅದರ ಮೇಲೆ 'ಕಸ್ತೂರಿ' ಎಂದು ಬರೆದುಕೊಂಡು ಹೋಗಬೇಕಾಗಿತ್ತು. ಇದೇ ಅವರ ಸಂಕಟದ ವಿಚಾರ. | |
| 24. | ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?<br>***ಉತ್ತರ :***<br>ಆಂಗ್ಲರು ಬಿಳಿಯ ವರ್ಣದವರು ಆಫ್ರಿಕನ್ನರು ಕಪ್ಪು ಬಣ್ಣದವರು ಆದರೂ ಇವರಿಬ್ಬರ ಮೈಯಲ್ಲಿ ಹರಿಯುವ ರಕ್ತ ಒಂದೇ ಬಣ್ಣದಿಂದ ಕೂಡಿದೆ. ಅಕ್ಕಿ ಬಿಳಿಯ ಬಣ್ಣದ ಧಾನ್ಯ, ರಾಗಿ, ಕಪ್ಪು ಅಥವಾ ಕಂದು ಬಣ್ಣದ ಧಾನ್ಯವಾಗಿದ್ದರೂ ಎರಡು ಸಸ್ಯಗಳ ಬಣ್ಣ ಹಸಿರೇ ಆಗಿದೆ. ಬಣ್ಣಗಳು ಮತ್ತು ಸ್ವಭಾವ ಬೇರೆಯಾಗಿದ್ದರೂ ಭೂಮಿ ತಾಯಿ ಕುಡಿಗಳ ಜೀವರಸ ಒಂದೇ ಆಗಿದೆ. | |
| 25. | ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ಕವಿ ನಿಸಾರ್ ಅಹಮದ್‌ರವರು ಹೇಗೆ ಹೇಳಿದ್ದಾರೆ ?<br>***ಉತ್ತರ :***<br>ಕಲಶದ ಸಂಕೇತವನ್ನು ಹೊಂದಿರುವ ಹಿಂದೂ ಧರ್ಮ ಶಿಲುಬೆಯ ಸಂಕೇತವಾಗಿರುವ ಕ್ರೈಸ್ತಧರ್ಮ ಹಾಗೂ ಬಿಳಿಯ ಮಿನಾರನ್ನು ಹೊಂದಿರುವ ಇಸ್ಲಾಂ ಧರ್ಮಗಳ ಮೂಲತತ್ವ ಒಂದೇ ಆಗಿರುವುದರಿಂದ ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ನಿಸಾರ್ ಅಹಮದ್‌ರವರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಭೌಗೋಳಿಕವಾಗಿ ಭಾರತೀಯರೆಲ್ಲ ಒಂದೇ ಎಂದು ಕವಿ ನಿಸಾರ್ ಅಹಮದ್‌ರವರು ಹೇಗೆ ಹೇಳಿದ್ದಾರೆ ?<br>***ಉತ್ತರ :***<br>ಕವಿ ನಿಸಾರ್ ಅಹಮದ್‌ರವರು ವಿಶಾಲವಾದ ಭಾರತದೇಶದಲ್ಲಿ ಕರ್ನಾಟಕ, ವಂಗ, ಆಂಧ್ರ ಮುಂತಾದ ರಾಜ್ಯಗಳಲ್ಲಿ ವಾಸಿಸುವ ಭಾರತೀಯರೆಲ್ಲರೂ ಒಂದೇ. ಹಾಗೆಯೇ ಪೂರ್ವ, ಉತ್ತರ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ಬೀಸುವ ಗಾಳಿ, ಮುಗಿಲು ಒಂದೇ ಆಗಿದೆ. ಅವುಗಳಲ್ಲಿ ಭೇದವೆಂಬುದಿಲ್ಲ. ಭಾರತೀಯರಾದ ನಾವು ಭೇದ ಮರೆತು ಏಕತಾಭಾವದಿಂದ ಬಾಳ್ವೆ ನಡೆಸಬೇಕೆಂಬ ಸಂದೇಶವನ್ನು ಇಲ್ಲಿ ನೀಡಿದ್ದಾರೆ. | |
| 27. | ಅಕ್ಷರವು ನಮಗೆ ಹೊಸ ಜೀವನ ಮತ್ತು ಹೊಸ ರೂಪವನ್ನು ಹೇಗೆ ಕೊಡುತ್ತದೆ ?<br>***ಉತ್ತರ :***<br>ಮಾನವನ ಜೀವನವು ಯಶಸ್ವಿಯಾಗಬೇಕಾದರೆ ಅವನಿಗೆ ಶಿಕ್ಷಣವಿರಬೇಕು. ಅಕ್ಷರ ಜ್ಞಾನವು ಅಲ್ಲಾವುದೀನನ ಅದ್ಭುತ ಮಾಯಾದೀಪದಂತೆ ಬಯಸಿದ್ದೆಲ್ಲವನ್ನೂ ನೀಡಿ ನಮ್ಮ ಜೀವನಕ್ಕೆ ಹೊಸ ರೂಪವನ್ನು ಕೊಡುತ್ತದೆ. ಕಷ್ಟಕಾರ್ಪಣ್ಯಗಳನ್ನು, ದಾಸ್ಯ ಸಂಕೋಲೆಯನ್ನು ಕಳಚಿ ಹಾಕಿ ಹೊಸ ಮಾನವನನ್ನಾಗಿ ಮಾಡುತ್ತದೆ. ನಮ್ಮ ಶಕ್ತಿಯನ್ನು ಅರಿತು ಹನುಮಂತನಂತೆ ನಾವು ವಿಕಾಸವಾಗಿ ದೇಶದ ಪ್ರಗತಿಗೆ ಬೆನ್ನೆಲುಬಾಗಿ ನಿಲ್ಲುವಂತೆ ಮಾಡುತ್ತದೆ. | |
| 28. | ಪುರಂದರದಾಸರು ಹೇಳಿರುವಂತೆ ಮನಸ್ಸನ್ನು ಶುದ್ಧವಾಗಿಡಲು ಅನುಸರಿಸಬೇಕಾದ ವಿಧಾನಗಳಾವುವು ?<br>***ಉತ್ತರ :***<br>ನಾವು ಪ್ರತಿನಿತ್ಯವೂ ಮಾಡುವ ಪಾಪಪುಣ್ಯಗಳನ್ನು ಲೆಕ್ಕಹಾಕಿ, ಒಳ್ಳೆಯ ಕೆಟ್ಟ ಕಾರ್ಯಗಳನ್ನು ಬೇರ್ಪಡಿಸಿ ಮನಸ್ಸನ್ನು ದಿನವೂ ಶುದ್ಧಗೊಳಿಸಿಕೊಳ್ಳಬೇಕು. ಧರ್ಮ ಅಧರ್ಮಗಳನ್ನು ಬೇರ್ಪಡಿಸಿ ಅಧರ್ಮದ ಬೇರನ್ನು ಕಿತ್ತೆಸೆದು ಪರಿಶುದ್ಧವಾಗಿ ನಡೆಯಬೇಕು. ಬಯಕೆಗಳನ್ನು ನಿಗ್ರಹಿಸಿ ತನು–ಮನವನ್ನು ದಂಡಿಸಿ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಂಡು ಪರಮಾತ್ಮನ ಪಾದ ಕಮಲವನ್ನು ಸದಾ ಧ್ಯಾನಿಸಬೇಕೆಂದು ಪುರಂದರದಾಸರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಒಂದೇ ಗೇಣಿನ ಅಂತರದಲ್ಲಿ ಮುಕ್ತಿಯು ಯಾವಾಗ ದೊರೆಯುವುದೆಂದು ಪುರಂದರದಾಸರು ಹೇಳಿದ್ದಾರೆ ? | |
| | ***ಉತ್ತರ :*** | |
| | ನಾವು ಪ್ರತಿನಿತ್ಯವೂ ಮಾಡುವ ಪಾಪ–ಪುಣ್ಯ, ಧರ್ಮ ಅಧರ್ಮ ಹಾಗೂ ಒಳ್ಳೆಯ ಕೆಟ್ಟ ಕೆಲಸಗಳನ್ನು ವಿಂಗಡಿಸಿ ಪಾಪ–ಅಧರ್ಮ, ಕೆಟ್ಟ ಕೆಲಸಗಳನ್ನು ದೂರಮಾಡುತ್ತ ಪರಿಶುದ್ಧವಾದ ನಡೆವಳಿಕೆಯನ್ನು ರೂಢಿಸಿಕೊಳ್ಳಬೇಕು. ಬಯಕೆಗಳನ್ನು ನಿಗ್ರಹಿಸಿ ನಮ್ಮಲ್ಲಿ ನಾವು ಪರಮಾತ್ಮನನ್ನು ಕಾಣುವ ಪ್ರಯತ್ನವನ್ನು ಮಾಡಬೇಕು. ಪರಮಾತ್ಮನಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟು ಆತನ ಪಾದ ಕಮಲವನ್ನು ಭಜಿಸುತ್ತಿದ್ದರೆ ಮುಕ್ತಿಯೆಂಬುದು ಒಂದೇ ಗೇಣಿನ ಅಂತರದಲ್ಲಿ ದೊರೆಯುತ್ತದೆಂದು ಪುರಂದರದಾಸರು ಹೇಳಿದ್ದಾರೆ. | |
| 30. | ಈರಪ್ಪ ಎಂ. ಕಂಬಳಿಯವರು ಮುಂಡರಗಿಗೆ ಹೋಗಲು ಕೊಪ್ಪಳದ ಮೂಲಕ ಹೋಗುವ ಮಾರ್ಗವನ್ನು ಏಕೆ ಆರಿಸಿಕೊಂಡರು ? | |
| | ***ಉತ್ತರ :*** | |
| | ಯಲಬುರ್ಗಿಯಿಂದ ಮುಂಡರಗಿಗೆ ಹೋಗಲು ನೇರ ಬಸ್ಸು ಇರಲಿಲ್ಲ. ಗದಗದ ಅಥವಾ ಕೊಪ್ಪಳದ ಮೂಲಕ ಬಳಸು ಪ್ರಯಾಣ ಮಾಡುವುದು ಅನಿವಾರ್ಯವಾಗಿತ್ತು. ಕೊಪ್ಪಳವು ಹೊಸದಾಗಿ ಸಾರಿಗೆ ಡಿಪೋ ಹೊಂದಿದ್ದು ಇತ್ತೀಚೆಗೆ ಜಿಲ್ಲಾ ಕೇಂದ್ರವೆಂಬ ಕಿರೀಟವನ್ನು ಬೇರೆ ಹೊತ್ತಿತ್ತು. ಲೇಖಕರು ಅದೇ ಜಿಲ್ಲೆಯವರೇ ಆಗಿದ್ದರು. ಈ ಎಲ್ಲಾ ಕಾರಣದಿಂದ ಕೊಪ್ಪಳದ ಮೂಲಕ ಹೋಗುವುದನ್ನು ಲೇಖಕರು ಆರಿಸಿಕೊಂಡರು. | |
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ." | |
| | ***ಉತ್ತರ :*** | |
| | ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು 'ಅಮೆರಿಕಾದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆರಿಸಿದ 'ಲಾಕಪ್ಪಿನಲ್ಲಿ ಒಂದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾತ್ರಿ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಟ್ರಾಫಿಕ್ ಪೊಲೀಸನು ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಹೇಳಿದ ಮಾತು.<br>ದಾರಿ ತಪ್ಪಿಸಿಕೊಂಡು ಅಲೆಯುತ್ತಿದ್ದ ಗೊರೂರರ ಸಂಕಷ್ಟವನ್ನು ತಿಳಿದ ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಅವರನ್ನು ತನ್ನ ಮನೆಗ ಕರೆದುಕೊಂಡು ಹೋಗಿ ಉಪಚರಿಸಿದನು. ನಂತರ ಮಾತನಾಡುತ್ತ ಭಾರತದ ಪೊಲೀಸರ ಸಂಬಂಳ, ಸಾರಿಗೆಯನ್ನು ವಿಚಾರಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.<br>ಇದು ಅಮೆರಿಕಾದ ಪೊಲೀಸ್‌ನವನ ಕಾನೂನು ಪರಿಪಾಲನೆಯನ್ನು ತಿಳಿಸುತ್ತದೆ. | |
| 32. | "ಇಕೋ, ಇನ್ನೊಂದು ಧ್ವಜವನ್ನು ತಂದಿರುವೆ"<br>***ಉತ್ತರ :***<br>ಪ್ರೊ. ಎಸ್.ಆರ್. ರೋಹಿಡೇಕರ್‌ರವರು ಬರೆದ 'ಮೂರು ಏಕಾಂತ ನಾಟಕಗಳು' ಕೃತಿಯಿಂದಾಯ್ದ 'ರಾಮಸಿಂಗ್ ಚೌಕ' ಎಂಬ ಏಕಾಂತ ನಾಟಕದಿಂದಾಯ್ದ 'ಧ್ವಜ ರಕ್ಷಣೆ' ಎಂಬ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ತುಳಜಾಬಾಯಿ ತನ್ನ ಮಗನಿಗೆ ಹೇಳಿದಳು. ಒಂದು ವರುಷದ ಹಿಂದಷ್ಟೇ ಪತಿಯನ್ನು ಕಳೆದುಕೊಂಡಿದ್ದರೂ ತನ್ನ ಮಗನನ್ನು ತುಳಜಾಬಾಯಿಯು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಕಳುಹಿಸಿ ಕೊಡುತ್ತಾಳೆ. ಹೋರಾಟದ ನಾಯಕತ್ವವನ್ನು ವಹಿಸಿದ ರಾಮಸಿಂಗನು ಕುಲಕರ್ಣಿಯ ಮಾತನ್ನು ದಿಕ್ಕರಿಸಿ ಆತನ ಗುಂಡಿಗೆ ಬಲಿಯಾಗುತಾನೆ. ಅವನ ಕೈಯಲ್ಲಿರುವ ಧ್ವಜವನ್ನು ಕಸಿದುಕೊಳ್ಳುತ್ತಾರ. ಈ ವಾರ್ತೆಯನ್ನು ತಿಳಿದ ದೇಶಭಕ್ತೆ ತುಳಜಾಬಾಯಿ ಮತ್ತೊಂದು ಧ್ವಜವನ್ನು ತಂದು ಮೇಲಿನಂತೆ ಹೇಳುತ್ತಾಳೆ.<br>ತುಳಜಾಬಾಯಿಯ ದೇಶಪ್ರೇಮವನ್ನು ನಾವಿಲ್ಲಿ ಕಾಣಬಹುದಾಗಿದೆ. | |
| 33. | "ಎದೆಯು ಮಿಡಿದು ತಾಳ ಹಿಡಿದು ಕುಣಿಯುತಿಹುದು ಈ ಕ್ಷಣ"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರ 'ಹೂವು ಹೊರಳುವವು ಸೂರ್ಯನ ಕಡೆಗೆ' ಎಂಬ ಕವನ ಸಂಕಲನದಿಂದ 'ಕೋಗಿಲೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಕವಿ ಕೋಗಿಲೆಯನ್ನು ವರ್ಣಿಸುತ್ತ ಈ ಮೇಲಿನ ಮಾತನ್ನು ಹೇಳಿದ್ದಾನೆ.<br>ಕೋಗಿಲೆಯ ಕಂಠ ಮಾಧುರ್ಯಕ್ಕೆ ಮನಸೋತು ಕವಿಯು ಇಡೀ ಜಗತ್ತಿನ ಸಂತಸ ಸಂಭ್ರಮದಿಂದ ಕೂಡಿದ ಕೋಗಿಲೆಯ ಗಾನವನ್ನು ಕೇಳಿದಾಗ ಅದು ಭಾವನೆಗಳ ತರಂಗವನ್ನು ಎಬ್ಬಿಸಿ ಎದೆಯು ಮಿಡಿಯುವಂತೆ ಮಾಡಿ ತಾಳಕ್ಕೆ ಕುಣಿಯುವಂತೆ ಮಾಡುತ್ತದೆ ಎನ್ನುವ ಸಂದರ್ಭವಿದು. ಇಲ್ಲಿ ಮನಸೆಳೆಯುವ ಕೋಗಿಲೆಯ ಕಂಠದ ಇಂಪು ವರ್ಣಿತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ಹೆಂಡಿರಾದರೆ ಮಕ್ಕಳ ಚಿಂತೆ"<br>***ಉತ್ತರ :***<br>ಈ ವಾಕ್ಯವನ್ನು 'ಗಮಕ ಗಂಗೋತ್ರಿ' ಎಂಬ ಕೃತಿಯಿಂದ ಆರಿಸಿದ ಅಂಬಿಗರ ಚೌಡಯ್ಯನವರ 'ವಚನ' ಎಂಬ ಪದ್ಯದಿಂದ ಆರಿಸಲಾಗಿದೆ.<br>ಅಂಬಿಗರ ಚೌಡಯ್ಯನವರು ಲೋಕಕ್ಕೆ ಹೇಳಿದ ಮಾತು.<br>ಬಿಡಿಸಿಕೊಳ್ಳಲಾಗದ ಚಿಂತೆಯ ಬಂಧನಕ್ಕೆ ಒಳಗಾಗಿ ಒದ್ದಾಡುತ್ತಿರುವ ಲೋಕದ ಜನರ ಬಗೆಗೆ ತಿಳಿಸುತ್ತ ಒಂದಾದ ಮೇಲೆ ಒಂದು ಚಿಂತೆಯು ಮನಸ್ಸನ್ನು ಬಿಡದೆ ಕಾಡುತ್ತಿದೆ. ಊಟವಿಲ್ಲದವರಿಗೆ ಊಟದ ಚಿಂತೆ, ಉಣ್ಣಲು ಸಿಕ್ಕ ಮೇಲೆ ಉಡುವ ಚಿಂತೆ, ಇಡುವ ಚಿಂತೆ ಇಡಲು ಸಾಕಷ್ಟಾದರೆ ಮದುವೆಯಾಗಬೇಕೆಂಬ ಚಿಂತೆ ಕಾಡುತ್ತದೆ ಎಂಬ ಸಂದರ್ಭದಲ್ಲಿ ಈ ಮಾತು ಬಂದಿವೆ. ಲೋಕದ ಚಿಂತೆಯನ್ನು ಬಿಟ್ಟು ಶಿವನ ಚಿಂತೆಯನ್ನು ಮಾಡಬೇಕೆಂಬುದು ಅಂಬಿಗರ ಚೌಡಯ್ಯನವರ ಆಶಯವಾಗಿದೆ. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಅಕ್ಷರ.............................................................<br>...................................................... ಮಾಯಾದೀಪ<br>ಅದು ...............................................................<br>.............................................................. ರೂಪ<br>***ಅಥವಾ***<br>ದೀಪ ...............................................................<br>.............................................................. ದೂತ<br>ಅವನ ...............................................................<br>.............................................................. ಸಮಸ್ತ<br>***ಉತ್ತರ :***<br>ಅಕ್ಷರವೆಂಬುದು ಅಲ್ಲಾದೀನನ<br>ಅದ್ಭುತ ಮಾಯಾದೀಪ<br>ಅದು ವಶವಾದರೆ ನಿನಗೆ ನೀಡುವುದು<br>ಹೊಸ ಜೀವನ, ಹೊಸ ರೂಪ.<br>**ಅಥವಾ** | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದೀಪ ಉಜ್ಜಿದರೆ ಅವತರಿಸುವನು<br>ಸರ್ವಶಕ್ತದೂತ<br>ಅವನ ಬೆನ್ನೇರಿ ನೀ ಸಂಚರಿಸುವೆ<br>ಬ್ರಹ್ಮಾಂಡ ಸಮಸ್ತ. | |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36 | ಜಿ.ಪಿ. ರಾಜರತ್ನಂ<br>***ಉತ್ತರ :***<br>ಇವರು ರಾಮನಗರ ಜಿಲ್ಲೆಯ ರಾಮನಗರದಲ್ಲಿ 1908 ಡಿಸೆಂಬರ್, ೫ರಲ್ಲಿ ಜನಿಸಿದರು. ಇವರು 'ರತ್ನನ ಪದಗಳು', 'ನಾಗನ ಪದಗಳು', 'ಗೌತಮ ಬುದ', 'ಏಸುಕ್ರಿಸ್ತ', 'ಗಂಡುಗೊಡಲಿ', 'ವಿಚಾರ ರಶ್ಮಿ' ಭಾಗ–1 ಮತ್ತು ಭಾಗ–2ನ್ನು ರಚಿಸಿದ್ದಾರೆ. | |
| 37. | ಚೆನ್ನವೀರ ಕಣವಿ<br>***ಉತ್ತರ :***<br>ಇವರು ೧೯೨೮ ಜೂನ್ ೨೮ರಂದು ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಇವರು 'ಆಕಾಶ ಬುಟ್ಟಿ', 'ಭಾವಜೀವ', 'ಜೀವಧ್ವನಿ', 'ಮಣ್ಣಿನ ಮೆರವಣಿಗೆ' ಮತ್ತು 'ನೆಲಮುಗಿಲು', 'ಹೂವು ಹೊರಳುವವು ಸೂರ್ಯನ ಕಡೆಗೆ' ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಸಮತೋಲನ ಮತ್ತು ಕಾವ್ಯಾನು ಸಂಧಾನ ಎಂಬುದು ಅವರ ವಿಮರ್ಶಾ ಕೃತಿಯಾಗಿದೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶ್ಶೆಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಕ್ಕೆ ಕಾರಣ ಹಾಗೂ ಅವರನ್ನು ಸೋಲಿಸಿದ ಪರಿಯನ್ನು ವಿವರಿಸಿ.<br>***ಅಥವಾ***<br>ಕಿತ್ತೂರ ರಾಣಿ ಚೆನ್ನಮ್ಮನ ದೇಶಾಭಿಮಾನ ಹಾಗೂ ಅವಳ ವಿರುದ್ಧ ನಡೆಸಿದ ಒಳಸಂಚನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಉತ್ತರ :*

ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗು ಹಾಕಿದ್ದರಿಂದ ಅಬ್ಬಕ್ಕದೇವಿಯು ಅವರ ವಿರುದ್ಧ ಹೋರಾಡಬೇಕಾಯಿತು. ಉಲ್ಲಾಳದ ಕರಾವಳಿಯಲ್ಲಿ ಪೋರ್ಚುಗೀಸರು ಲಂಗರು ಹಾಕಿದಾಗ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ, ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣದೋಣಿಗಳಲ್ಲಿ ಹೋಗಿ ಸಾವಿರಾರು ತೆಂಗಿನ ಗರಿಯ ಉರಿಯುವ ದೀವಟಿಕೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆಸೆದರು. ದಗದಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸರ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದರು. ಆಗ ಅಬ್ಬಕ್ಕದೇವಿಯ ಸೈನಿಕರು ಅವರನ್ನು ಖಡ್ಗ, ಈಟಿಗಳಿಂದ ಇರಿದು ಸಾಯಿಸಿದರು. ಪೋರ್ಚುಗೀಸರ ಹಡಗನ್ನು ಮುಳುಗಿಸಿ ಮಿರಾಂಡಾ ಮತ್ತು ಡಿ ಮೆಲ್ಲೊ ಎಂಬ ಸೇನಾಪತಿಗಳು ಓಡಿ ಹೋಗುವಂತೆ ಮಾಡಿದರು.

**ಅಥವಾ**

ದೇಶಾಭಿಮಾನಿಯಾದ ಕಿತ್ತೂರು ರಾಣಿ ಚೆನ್ನಮ್ಮ ಬಲಾಢ್ಯರಾದ ಬ್ರಿಟಿಷರನ್ನು ಸೋಲಿಸಿದಳು. ಮುಂದೆ ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿ ಚೆನ್ನಮ್ಮರಾಣಿಯ ತೋಪು ಹಾರದಂತೆ ಮಾಡಿದರು. ಇದರಿಂದಾಗಿ ಸ್ವಾತಂತ್ರ್ಯದ ಕನಸನ್ನು ಕಂಡ ವೀರರಾಣಿ ಚೆನ್ನಮ್ಮಾಳು ಸೆರೆಯಾಗುವಂತಾಯಿತು. ಸೆರೆಮನೆಯಲ್ಲಿ ರಾಣಿಯನ್ನು ಸಂಧಿಸಲು ಬಂದ ಸಂಗೊಳ್ಳಿರಾಯಣ್ಣನು ತಾಯಿ ಎಂದು ಕರೆದಾಗ "ತಾಯಿ ಎಂದು ಕರೆದ ಕನ್ನಡದ ಕಂದಮ್ಮ ಯಾರು ? ನಿಮ್ಮ ಧಮನಿ ಧಮನಿಗಳಲ್ಲಿ ರಕ್ತದ ಕಣಗಳು ಇರುವವರೆಗೂ ಹೋರಾಡಿ" ಎಂದು ಹುರಿದುಂಬಿಸಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಹಳೆಯನ್ನು ಊದಿದಳು.

39. ಮಳೆರಾಯನನ್ನು ರೈತರು ಪ್ರಾರ್ಥಿಸುವ ಪರಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

'ಜಾನಪದ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |

ರೈತರ ಪ್ರಧಾನ ಕಸುಬು ಬೇಸಾಯ. ಬೆಳೆಬೆಳೆಯಲು ಮಳೆ ಅನಿವಾರ್ಯ, ಮಳೆ ಬಾರದಿದ್ದರೆ ಭೂಮಿಯು ಬರಡಾಗಿ ದನಕರುಗಳು ಮೇವಿಲ್ಲದೆ ಸೊರಗಿ ಹೋಗುತ್ತವೆ. ಆ ಸಮಯದಲ್ಲಿ ರೈತರು ಅಪ್ಪನಂತೆ ರಕ್ಷಕನ ಸ್ಥಾನದಲ್ಲಿರುವ ಮಳೆರಾಯನನ್ನು ಬಂದು ರಕ್ಷಿಸುವಂತೆ ವಿನಯದಿಂದ ಬೇಡಿಕೊಳ್ಳುತ್ತಾರೆ. ಪೂರ್ವ ದಿಕ್ಕಿನಲ್ಲಿ ಮೋಡಗಳು ಕಂಡಾಗ ಅದರ ಅಂದವನ್ನು ಕಂಡು ಆನಂದಿಸುತ್ತಾರೆ. ಗೋಡೆಗೆ ಕಪ್ಪು ಬಣ್ಣ ಬಳಿದಂತಿದೆ. ಭೂಮಿಗೆ ಮಳೆ ಬೀಳಿಸಲು ಆಕಾಶದಲ್ಲಿ ಮಳೆರಾಯ ಭೋರ್ಗರೆಯುತ್ತಿದ್ದಾನೆ. ಭೈರವನು ಬೆಟ್ಟದ ಮೇಲೆ ಎದ್ದು ಕುಳಿತಿದ್ದಾನೆ. ಮಳೆರಾಯನೇ ನೀನು ಜಗ್ಗಿಸಿ ಬೆಟ್ಟದ ಮೇಲೆ ಮಳೆಯನ್ನು ಸುರಿಸು ಎಂದು ರೈತರು ಪ್ರಾರ್ಥಿಸಿದ್ದಾರೆ.

*ಅಥವಾ*

ಭೂಮಿಗೆ ಮಳೆ ಬೀಳದೆ ದನಕರುಗಳೆಲ್ಲಾ ಸಪ್ಪೆದಂಟಿನಂತೆ ಸೊರಗಿ ಹೋಗಿವೆ. ರೈತಾಪಿ ಜನರಾದ ನಮ್ಮನ್ನು ರಕ್ಷಿಸಬೇಕಾದ ಮಳೆರಾಯ ನಮ್ಮ ಮೇಲೆ ಕರುಣೆ ಇಟ್ಟು ಮಳೆಯನ್ನು ಸುರಿಸು ಎಂದು ದೈನ್ಯದಿಂದ ಕೇಳಿಕೊಳ್ಳುತ್ತಾರೆ. ತಮ್ಮ ಪ್ರಾರ್ಥನೆಗೆ ಮಳೆರಾಯ ಓಗೊಟ್ಟಂತೆ ಪೂರ್ವದಿಕ್ಕಿನಲ್ಲಿ ಭೋರ್ಗರೆಯುವ ಶಬ್ದವನ್ನು ಮಾಡುತ್ತ ಮೋಡಗಳೊಂದಿಗೆ ಆಗಮಿಸುತ್ತಿರುವುದನ್ನು ಕಂಡು ಗೋಡೆಗೆ ಕಪ್ಪು ಬಣ್ಣ ಹಚ್ಚಿದಂತೆ ಕಾಣುತ್ತಿದೆಯೆಂದು ಜನರನ್ನು ಕರೆದು ತೋರಿಸುವ ಪರಿ ಮನಸ್ಸಿಗೆ ಆನಂದವನ್ನುಂಟು ಮಾಡುತ್ತದೆ. ಭೈರವನು ಎದ್ದು ಬೆಟ್ಟದ ಮೇಲೆ ಕಾಯುತ್ತಿದ್ದಾನೆ. ಸೋನೆಯ ಮಳೆಯೇ ಮೂಡಲದಿಕ್ಕಿನಲ್ಲಿ ಮುತ್ತಿನಂತೆ ಸೇರಿ ಬೆಟ್ಟದ ಮೇಲೆ ಜಗ್ಗಿಸಿ ಹೊಯ್ದು, ಕೆರೆಕಟ್ಟೆಗಳು ತುಂಬುವಂತೆ ಮಾಡು. ಸ್ವಾತಿಯ ಜಡಿ ಮಳೆಯು ಹೊಯ್ದರ ಸಾವಿರಾರು ಕೆರೆಕಟ್ಟೆಗಳು ತುಂಬುತ್ತದೆ. ಕುಣಿಗಲ್‌ನಂತಹ ದೊಡ್ಡಕೆರೆಗಳು ತುಂಬಿ ಕುಚ್ಚಲಮೀನಿನಂತಹ ಉತ್ತಮ ತಳಿಗಳಿಂದ ಕೂಡಿದ ಜಲಚರಗಳ ಸಂತತಿ ವೃದ್ಧಿಯಾಗಿ ಎಲ್ಲರ ಮನದಲ್ಲೂ ಆನಂದವುಂಟಾಗುತ್ತದೆ. ಆದ್ದರಿಂದ ನಮ್ಮೆಲ್ಲರನ್ನು ಕಾಯುವ ಮಳೆದೇವರೇ ನಮ್ಮೆಲ್ಲರ ಮೇಲೆ ಕರುಣೆ ತೋರು ಎಂದು ಜನಪದರು ಪ್ರಾರ್ಥಿಸುತ್ತಾರೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | 'ಧರ್ಮ' ಪದದ ವಿರುದ್ಧಾರ್ಥಕ ರೂಪ | |
| | (ಎ) ಅಧರ್ಮ (ಬಿ) ಸುಧರ್ಮ | |
| | (ಸಿ) ಪರಧರ್ಮ (ಡಿ) ಸ್ವಧರ್ಮ | |
| | ***ಉತ್ತರ :*** (ಎ) ಅಧರ್ಮ | |
| 41. | 'ತಾನು' ಎನ್ನುವುದು ಈ ಸರ್ವನಾಮವಾಗಿದೆ | |
| | (ಎ) ಪುರುಷಾರ್ಥಕ (ಬಿ) ಭಾವನಾರ್ಥಕ | |
| | (ಸಿ) ಪ್ರಶ್ನಾರ್ಥಕ (ಡಿ) ಆತ್ಮಾರ್ಥಕ | |
| | ***ಉತ್ತರ :*** (ಡಿ) ಆತ್ಮಾರ್ಥಕ | |
| 42. | ಭೂಮಿ + ಅಲ್ಲಿ ಇದನ್ನು ಕೂಡಿಸಿ ಬರೆದಾಗ | |
| | (ಎ) ಭೂಮಿಯಿಂದ (ಬಿ) ಭೂಮಿಯಲ್ಲಿ | |
| | (ಸಿ) ಭೂಮಿಯಿಲ್ಲಿ (ಡಿ) ಭೂಮಿವಲ್ಲಿ | |
| | ***ಉತ್ತರ :*** (ಬಿ) ಭೂಮಿಯಲ್ಲಿ | |
| 43. | ಇದು ಷಷ್ಠೀ ವಿಭಕ್ತಿ ಪ್ರತ್ಯಯ | |
| | (ಎ) ಅನ್ನು (ಬಿ) ಇಂದ | |
| | (ಸಿ) ಅ (ಡಿ) ಅಲ್ಲಿ | |
| | ***ಉತ್ತರ :*** (ಸಿ) ಅ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | 'ಪೂರ್ವ' ದಿಕ್ಕಿಗೆ ಇರುವ ಕನ್ನಡ ಪದ<br>(ಎ) ತೆಂಕಣ (ಬಿ) ಬಡಗಣ<br>(ಸಿ) ಪಡುವಣ (ಡಿ) ಮೂಡಣ<br>***ಉತ್ತರ :*** (ಡಿ) ಮೂಡಣ | |
| 45. | 'ಸೀತೆಯ ಮುಖ ಕಮಲದಂತೆ ಅರಳಿತು' ಇಲ್ಲಿ ಆಗಿರುವ ಅಲಂಕಾರ<br>(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ<br>(ಸಿ) ದೃಷ್ಟಾಂತಾಲಂಕಾರ (ಡಿ) ಯಮಕಾಲಂಕಾರ<br>***ಉತ್ತರ :*** (ಬಿ) ಉಪಮಾಲಂಕಾರ | |
| 46. | ಕ್ರಿಯಾಪದದ ಮೂಲರೂಪ<br>(ಎ) ಧಾತು (ಬಿ) ಪ್ರಾತಿಪಧಿಕ<br>(ಸಿ) ಆಖ್ಯಾತ (ಡಿ) ವಿಧ್ಯರ್ಥಕ<br>***ಉತ್ತರ :*** (ಎ) ಧಾತು | |
| 47. | 'ಹಿಂದೆ ಮುಂದೆ ನೋಡದೆ ಮನೆಮಠ ಬಿಟ್ಟು ಮತ್ತೆ ಮತ್ತೆ ಪಟಪಟನೆ ಮಾತಾಡಬಾರದು' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ<br>(ಎ) ಹಿಂದೆ ಮುಂದೆ (ಬಿ) ಮನೆಮಠ<br>(ಸಿ) ಮತ್ತೆ ಮತ್ತೆ (ಡಿ) ಪಟಪಟನೆ<br>***ಉತ್ತರ :*** (ಡಿ) ಪಟಪಟನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | 'ಬೇಗ ಬೇಗ' ಎನ್ನುವುದು<br>(ಎ) ದ್ವಿರುಕ್ತಿ (ಬಿ) ಜೋಡುನುಡಿ<br>(ಸಿ) ಪಡೆನುಡಿ (ಡಿ) ನುಡಿಗಟ್ಟು<br>***ಉತ್ತರ :*** (ಎ) ದ್ವಿರುಕ್ತಿ | |
| 49. | 'ರಾಣಿ' ಪದದ ಬಹುವಚನ ರೂಪ<br>(ಎ) ರಾಣಿಯರು (ಬಿ) ರಾಣಿಯಂದಿರು<br>(ಸಿ) ರಾಣಿಗಳು (ಡಿ) ರಾಣಿಯರುಗಳು<br>***ಉತ್ತರ :*** (ಎ) ರಾಣಿಯರು | |
| 50. | 'ಪತಾಕೆ' ಪದದ ಅರ್ಥ<br>(ಎ) ಚಿಟ್ಟೆ (ಬಿ) ಬಾವುಟ<br>(ಸಿ) ಬಾವುಲಿ (ಡಿ) ತಟ್ಟೆ<br>***ಉತ್ತರ :*** (ಬಿ) ಬಾವುಟ | |
| 51. | ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು<br>(ಎ) 5 (ಬಿ) 13<br>(ಸಿ) 34 (ಡಿ) 49<br>***ಉತ್ತರ :*** (ಡಿ) 49 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** <br> **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** <br> (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | $4 \times 1 = 4$ |
| | ಆಧುನಿಕ ಹವ್ಯಾಸಿ ರಂಗಭೂಮಿಗೆ ಭದ್ರ ಬುನಾದಿಯನ್ನು ಹಾಕಿದ ಕಾರಂತರನ್ನು ಹವ್ಯಾಸಿ ರಂಗಭೂಮಿಯ ಹರಿಕಾರರೆಂದು ಕರೆಯುತ್ತಾರೆ. ಇವರು ಬಯಲಿನಲ್ಲಿ ರಂಗಭೂಮಿಯನ್ನು ಕಂಡುಕೊಂಡರು. ಕುವೆಂಪುರವರ 'ಕಿಂದರಜೋಗಿ'ಯ ಪ್ರಯೋಗಕ್ಕಾಗಿ ರಂಗಾಯಣದಲ್ಲಿ ಬೊಮ್ಮನ ಹಳ್ಳಿಯನ್ನೇ ನಿರ್ಮಿಸಿದರು. ಮೈಸೂರಿನ ರಂಗಾಯಣದಲ್ಲಿ 'ಗೋವಿನ ಹಾಡು', 'ಕಿಂದರ ಜೋಗಿ', 'ಚಂದ್ರಹಾಸ', 'ಮೂಕನ ಮಕ್ಕಳು' ಮುಂತಾದ ನಾಟಕಗಳ ಪ್ರಯೋಗವನ್ನು ಮಾಡಿದರು. ಮಕ್ಕಳಿಗೆ ಹೊಸ ರಂಗವನ್ನು ನಿರ್ಮಿಸಿದರು. ಇವರು ನಿರ್ದೇಶಿಸಿದ 'ವಂಶವೃಕ್ಷ', 'ತಬ್ಬಲಿ ನೀನಾದೆ ಮಗನೆ', 'ಚೋಮನ ದುಡಿ' ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿಗಳು ಬಂದಿವೆ. | |
| 52. | ಕಾರಂತರನ್ನು 'ಹವ್ಯಾಸಿ ರಂಗಭೂಮಿಯ ಹರಿಕಾರ'ರೆಂದು ಏಕೆ ಕರೆಯುತ್ತಾರೆ ? <br> ***ಉತ್ತರ :*** <br> ಆಧುನಿಕ ಹವ್ಯಾಸಿ ರಂಗಭೂಮಿಗೆ ಭದ್ರ ಬುನಾದಿಯನ್ನು ಹಾಕಿದ ಕಾರಂತರನ್ನು ಹವ್ಯಾಸಿ ರಂಗಭೂಮಿಯ ಹರಿಕಾರರೆಂದು ಕರೆಯುತ್ತಾರೆ. | |
| 53. | ಕಾರಂತರು ಬೊಮ್ಮನ ಹಳ್ಳಿಯನ್ನು ಏಕೆ ನಿರ್ಮಿಸಿದರು ? <br> ***ಉತ್ತರ :*** <br> ಕುವೆಂಪುರವರ 'ಕಿಂದರಜೋಗಿ'ಯ ಪ್ರಯೋಗಕ್ಕಾಗಿ ರಂಗಾಯಣದಲ್ಲಿ ಕಾರಂತರು ಬೊಮ್ಮನ ಹಳ್ಳಿಯನ್ನು ನಿರ್ಮಿಸಿದರು. | |
| 54. | ಮಕ್ಕಳಿಗಾಗಿ ಕಾರಂತರು ಹೊಸದಾದ ಲೋಕವನ್ನು ಹೇಗೆ ನಿರ್ಮಿಸಿದರು ? <br> ***ಉತ್ತರ :*** <br> ಕಾರಂತರು ಮೈಸೂರಿನ ರಂಗಾಯಣದಲ್ಲಿ 'ಗೋವಿನ ಹಾಡು', 'ಕಿಂದರ ಜೋಗಿ', 'ಚಂದ್ರಹಾಸ', 'ಮೂಕನ ಮಕ್ಕಳು' ಮುಂತಾದ ಪ್ರಯೋಗಗಳನ್ನು ಮಾಡಿ ಮಕ್ಕಳಿಗಾಗಿ ಹೊಸದಾದ ಲೋಕವನ್ನು ನಿರ್ಮಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಕಾರಂತರು ನಿರ್ದೇಶಿಸಿದ ಚಿತ್ರಗಳಾವುವು ?<br>***ಉತ್ತರ :***<br>ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಕಾರಂತರು ನಿರ್ದೇಶಿಸಿದ ಚಿತ್ರಗಳು – 'ವಂಶವೃಕ್ಷ', 'ತಬ್ಬಲಿ ನೀನಾದೆ ಮಗನೆ', 'ಚೋಮನ ದುಡಿ'. | |
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>✳ ಶಕ್ತಿಗಿಂತ ಯುಕ್ತಿ ಮೇಲು<br>✳ ಬೆಳೆಯುವ ಪೈರು ಮೊಳಕೆಯಲ್ಲಿ<br>✳ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಭಾಷಾ ಶುದ್ಧಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 57. | **ಪತ್ರ ಲೇಖನ ಬರೆಯುವುದು :**<br>ನಿಮ್ಮನ್ನು ಚನ್ನರಾಯ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಕಾರ್ತಿಕ್ / ಮಧುಮಿತಾ' ಎಂದು ಭಾವಿಸಿಕೊಂಡು, ಊರಿಗೆ ಹೋಗಬೇಕಾಗಿರುವುದರಿಂದ ಎರಡು ದಿನಗಳ ರಜೆ ನೀಡುವಂತೆ ಕೋರಿ, ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೊಂದು ಪತ್ರವನ್ನು ಬರೆಯಿರಿ.<br>***ಅಥವಾ***<br>ನಿಮ್ಮನ್ನು ಶಿಕಾರಿಪುರದ 'ಶ್ರೀಕಾಂತ / ಅಶ್ವಿನಿ' ಎಂದು ಭಾವಿಸಿಕೊಂಡು, ನಿಮ್ಮ ಪರೀಕ್ಷಾ ಸಿದ್ಧತೆಯನ್ನು ತಿಳಿಸುತ್ತಾ ಹರಿಹರದಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.<br>***ಉತ್ತರ :***<br>ವ್ಯಾವಹಾರಿಕ ಪತ್ರ : | 1 × 4 = 4 |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | * ಮಕ್ಕಳ ದಿನಾಚರಣೆ | |
| | * ಪರಿಸರ ಮಾಲಿನ್ಯ | |
| | * ನನ್ನ ನೆಚ್ಚಿನ ಕವಿ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |